## ಸರ್ಕಾರದ ನೆರವು ಅಗತ್ಯ

'ಹಲ್ಲು ಹುಳುಕು, ಪರಿಹಾರ ಏನು? (ಡಾ. ಪ್ರೇಮಲತ ಬಿ.) – ಲೇಖಕಿ ಹೇಳುವಂತೆ ದಂತ ವೈದ್ಯಕೀಯ ಶಿಕ್ಷಣಕ್ಕೆ, ನಂತರ ಚಿಕಿತ್ಸಾಲಯವನ್ನು ಅಣಿಗೊಳಿಸುವ ಪ್ರಯತ್ನದಲ್ಲಿ ವೈದ್ಯರು ಹಣ ಹೂಡಿ ಸಾಲಗಾರರಾಗುತ್ತಾರೆ ಎಂಬುದರಲ್ಲಿ ಸಂದೇಹವಿಲ್ಲ. ಏಕ ಪ್ರಕಾರದ ಚಿಕಿತ್ಸೆಯಾದ್ದರಿಂದ ಕಡಿಮೆ ಬಡ್ಡಿಗೆ ಸರ್ಕಾರ ಸಾಲ ನೀಡಿ ಸಮಸ್ಯೆ ಬಗೆಹರಿಸಬೇಕು.

–ರಾಜಶೇಖರ ಹಾದಿಮನಿ, ಧಾರವಾಡ

## ಸೊಗಸಾದ ಧಾರಾವಾಹಿ

ಯಂಡಮೂರಿಯವರ 'ದಿಂಬಿನಡಿಯಲ್ಲೊಂದು ವಿಷಸರ್ಪ' ಧಾರಾವಾಹಿ ಸೊಗಸಾಗಿ ಮೂಡಿ ಬರುತ್ತಿದೆ. ಆದರೆ ಸಾಕಷ್ಟು ಪದಗಳು ತಪ್ಪಾಗಿ ಮುದ್ರಿತಗೊಂಡು, ಗಲಿಬಿಲಿಯಾಗುತ್ತಿದೆ. ದಯವಿಟ್ಟು ಈ ರೀತಿಯ ದೋಷಗಳನ್ನು ಸರಿಪಡಿಸಿ ಓದಿನ ಸಂತೋಷವನ್ನು ಹೆಚ್ಚಿಸಿ.

–ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

## ತರ್ಕಪೂರ್ಣ

'ಪುರಂಜೀವಿ'ಯವರ 'ಶಸ್ತ್ರ–ಶಾಸ್ತ್ರ'ದ ವಿಚಾರ ಲಹರಿ ತರ್ಕಬದ್ಧವಾಗಿದೆ. ಶಸ್ತ್ರಕ್ಕೂ ಶಾಸ್ತ್ರಕ್ಕೂ ಅವರು ನೀಡಿರುವ ಅರ್ಥಪೂರ್ಣ ವಿವರಣೆ, ಗ್ರಹಿಸಿದರೆ ಉಪಯುಕ್ತ – ಶಸ್ತ್ರವೇ ಶಾಸ್ತ್ರವಾಗಿ, ಶಾಸ್ತ್ರವೇ ಶಸ್ತ್ರವಾಗಿ ಮಾರ್ಪಟ್ಟರೆ ಪರಿಣಾಮ ಭೀಕರ.

–ಸುಂದರ್, ಬೆಂಗಳೂರು




## ಔಷಧಿಗಳ ಚಕ್ರವ್ಯೂಹ

ಸಾರ್ವಜನಿಕರ ಕಣ್ಣು ತೆರೆಸುವ ಲೇಖನ ಬರೆದಿರುವ ಡಾ. ಶ್ರೀನಿವಾಸ ಕಕ್ಕಿಲಾಯ ಅವರಿಗೆ ಅಭಿನಂದನೆಗಳು. ಔಷಧಿಗಳ ಅಡ್ಡ ಪರಿಣಾಮ, ಅತಿ ಬಳಕೆ ಹಾಗೂ ದುರ್ಬಳಕೆ ಆಯುರ್ವೇದ, ಹೋಮಿಯೊಪತಿ, ಮತ್ತಿತ್ತರ ಔಷಧಿಗಳಿಗೂ ಅನ್ವಯವಾಗುತ್ತದೆ. ಇಂಗ್ಲಿಷ್ ಆಧುನಿಕ ಔಷಧಿಗಳು ಕ್ಷೇಮವಲ್ಲ, ಆಯುರ್ವೇದ–ಹೋಮಿಯೋಪತಿ ಔಷಧಿಗಳೇ ಕ್ಷೇಮ ಎಂಬ ತಪ್ಪು ನಂಬಿಕೆಯು ಎಲ್ಲೆಡೆ ಹರಡುತ್ತಿದೆ. ಯಾವುದೇ ಔಷಧಿಯನ್ನು ಬಳಸುವಾಗ ವಿವೇಚನೆ ಅತ್ಯಗತ್ಯ. ಔಷಧಿಗಳ ಸದ್ಬಳಕೆಯ ಹೊಣೆ ವೈದ್ಯರು, ಜನಸಾಮಾನ್ಯರು ಮತ್ತು ಸರ್ಕಾರದ ಮೇಲಿದೆ. ನೋವು ನಿವಾರಕ, ಶಮನಕಾರಿ ಮಾತ್ರೆಗಳನ್ನು ಬಳಸುವಾಗ ಕಟ್ಟೆಚ್ಚರ ಅಗತ್ಯ.

– ಡಾ. ಸಿ.ಆರ್. ಚಂದ್ರಶೇಖರ್, ಮನೋವೈದ್ಯ

ಜನಸಾಮಾನ್ಯರಿಗೆ ಮದ್ದಿನ ಬಳಕೆ ಬಗ್ಗೆ ಕಕ್ಕಿಲಾಯರು ಸಾಕಷ್ಟು ವಿಷಯ ತಿಳಿಸಿದ್ದಾರೆ. ತಮಾಷೆ ಏನೆಂದರೆ ನಮ್ಮಲ್ಲಿ ಮದ್ಯ ವ್ಯಸನಿಗಳು ಎಷ್ಟಿದ್ದಾರೋ ಅಷ್ಟೇ ಸಂಖ್ಯೆಯಲ್ಲಿ ಮದ್ದಿನ ವ್ಯಸನಿಗಳೂ ಇದ್ದಾರೆ. ಮೊದಲನೆಯವರದು ತೆರೆಯ ಮುಂದಿನ ಆಟವಾದರೆ, ಎರಡನೆಯವರದ್ದು ತೆರೆಯ ಹಿಂದಿನಾಟ ಅಷ್ಟೆ. ವೈದ್ಯಕೀಯ ಕ್ಷೇತ್ರ ಖಾಸಗೀಕರಣವಾಗಿ, ಬೇಕಾಬಿಟ್ಟಿ ಔಷಧಿಯಿಂದ ಆರೋಗ್ಯ ಹಾಳುಮಾಡಿಕೊಳ್ಳುತ್ತಿದ್ದೇವೆಂಬುದನ್ನು ಲೇಖಕರು ತಿಳಿಸಿರುವುದು ಸರಿಯಾಗಿದೆ.

– ಅರವಿಂದ. ಜಿ.ಜೋಷಿ, ಮೈಸೂರು. ಗಾಣಧಾಳು ರಾಮಣ್ಣ, ಬೆಂಗಳೂರು.

ಜನಗಳ ವಿದ್ಯಾರ್ಹತೆ ಹೆಚ್ಚಿದಂತೆಲ್ಲ ಸ್ವಯಂಪ್ರೇರಿತ ನಿರ್ಧಾರಗಳು ಹೆಚ್ಚುತ್ತಿದ್ದು ವೈದ್ಯಕೀಯ ರಂಗವನ್ನೂ ಸಹ ಬಿಟ್ಟಿಲ್ಲ. ಈ ಸನ್ನಿವೇಶಕ್ಕೆ ಪೂರಕವೆಂಬಂತೆ ರಂಗುರಂಗಿನ ಜಾಹೀರಾತುಗಳು ಜನರ ಆಲೋಚನೆಗಳಿಗೆ ಪುಷ್ಟಿ ನೀಡುತ್ತವೆ. ಈ ನಿಟ್ಟಿನಲ್ಲಿ ಗ್ರಾಮೀಣ ಭಾಗದ ಮಂದಿಯೂ ಹೊರತಲ್ಲ. ಒಂದು ದೃಷ್ಟಿಕೋನದಲ್ಲಿ ಅಶಿಕ್ಷಿತ ವರ್ಗವೇ ಮೇಲು ಎನಿಸುತ್ತದೆ. ಕಾರಣ, ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯಕೀಯ ಸೌಲಭ್ಯ ಇಂದಿಗೂ ಆದಿಕಾಲದ ಮಾದರಿಯಲ್ಲಿದೆ. ಹಾಗಾಗಿ ಜಾಹೀರಾತುಗಳ ಅನ್ವಯ ಔಷಧಿ ಸೇವನೆ ಅನಿವಾರ್ಯವಾಗಿದೆ.

–ರಾಜೀವ್. ಎನ್. ಮಾಗಲ್, ಸಕಲೇಶಪುರ

ಲೇಖನ ಔಷಧಗಳ ಚಕ್ರವ್ಯೂಹದ ಬಗ್ಗೆ ಭೀಕರ ಚಿತ್ರ ಕೊಟ್ಟಿದೆ. ಸರಿ. ಇದೊಂದು ಜಾಲವೇ ಹೌದು. ಆದರೆ, ಕಾಯಿಲೆ ಬಂದಾಗ ಅರಿಶಿನಶುಂಠಿ ಕಷಾಯ ಕುಡಿಯುವ ತಾಳ್ಮೆ ಯಾರಿಗೂ ಇಲ್ಲ. ಮನೆಮದ್ದು ಮಾಡಿಕೊಡುತ್ತಿದ್ದ ಅಜ್ಜಅಜ್ಜಿಯರನ್ನು ದೂರ ದೇವರಂತೆ ಒಂದು ಠಾವಿನಲ್ಲಿಟ್ಟಿದ್ದೇವೆ. ಈಗ ಔಷಧ, ಮಾತ್ರೆ, ಐಸಿಯು ಸ್ಪೆಷಲಿಸ್ಟ್‌ಗಳು ಹೇಳಿದಂತೆ ಕೇಳುತ್ತಾ ಬಂದಿದ್ದೇವೆ. ಮಣಿಪಾಲದ (ಬಿ.ಎಂ. ಹೆಗಡೆ) ಖ್ಯಾತ ವೈದ್ಯಪ್ರಾಧ್ಯಾಪಕರು 'ಓಡುವುದು ಹಾಳು' ಎನ್ನುತ್ತಾರೆ. ನಾವೀಗ ಸೆಡೆಂಟರಿ ಲೈಫಿಗೆ ಒಗ್ಗಿಹೋಗಿದ್ದೇವೆ. ಈಗ ಹಾಲು ತರಕಾರಿ ತರುವುದು, ವಾಕಿಂಗ್ ಹೋಗುವುದೇ ವ್ಯಾಯಾಮ, ರೋಗ ಬಂದರೆ, ಯೋಗದ ಮೊರೆ ಹೋಗುತ್ತಿದ್ದೇವೆ. ಹಾಗಾದರೆ, ಹೇಗೆ ಇರಬೇಕು?

–ಪದ್ಮನಾಭ ರಾವ್

## ಆನಂದ ತಂದ ಸಂದರ್ಶನ



ಕಲರ್ಸ್ ಸೂಪರ್ ಚಾಲನ್‌ನಲ್ಲಿ ಪ್ರಸಾರ ಆಗುತ್ತಿರುವ, ಸೀತಾರಾಮ್ ಅವರ ನಿರ್ದೇಶನದ 'ಮಗಳು ಜಾನಕಿ' ಧಾರಾವಾಹಿಯ ಪ್ರಮುಖ ಕಲಾವಿದರಾದ ರವಿ ಪ್ರಸಾದ್ ಮಂಡ್ಯ ಅವರ ಸಂದರ್ಶನವನ್ನು ಓದಿ ನಮ್ಮ ಮನಕ್ಕೆ ಹಾಲು ಸಕ್ಕರೆ ಸವಿದಷ್ಟು ಆನಂದವಾಯಿತು. ರವಿ ಪ್ರಸಾದ್ ಅಭಿನಯ ಮನೋಜ್ಞವಾಗಿದೆ, ಸಹಜವಾಗಿದೆ. ಅವರ ವೃತ್ತಿಜೀವನದ ನಾಳೆಗಳಿಗೆ ಶುಭಾಶಯಗಳು.

–ಕೆ.ಎಲ್. ಬಾಬು, ಬೀರೂರು

## ಅನುಪಮ ಅಭಿನೇತ್ರಿ

ಕಳೆದ ಏಳು ದಶಕಗಳಿಂದ ನಟಿಯಾಗಿ ರಂಗಭೂಮಿಗೆ ತನ್ನ ಜೀವನವನ್ನೇ ಸಮರ್ಪಿಸಿಕೊಂಡ, ಸಂಗೀತ ಹಾಗೂ ಅಭಿನಯ ಎರಡರಲ್ಲೂ ಸಾಧನೆಯ ಶಿಖರವೇರಿದ, ಕಂಪನಿ ನಾಟಕಗಳಲ್ಲೂ ಸೇವೆ ಸಲ್ಲಿಸಿ ಮಿಂಚಿದ ಹತ್ತು ಹಲವು ಪ್ರತಿಷ್ಠಿತ ಪ್ರಶಸ್ತಿಗಳಿಗೆ ಭಾಜನರಾದ 81 ವರ್ಷದ ಸುಭದ್ರಮ್ಮ ಮನ್ಸೂರರ ರಂಗಪಯಣ (ಗುಡಿಹಳ್ಳಿ ನಾಗರಾಜು) ರಂಗು ರಂಗಾಗಿದೆ.

–ಪಿ. ಜಯವಂತ ಪೈ, ಕುಂದಾಪುರ



'ಹೇಮರೆಡ್ಡಿ ಮಲ್ಲಮ್ಮ' ನಾಟಕದಲ್ಲಿ ಅವರು ಹಾಡುವ ಅಕ್ಕಮಹಾದೇವಿ ವಚನಗಳು ಭಾವಪೂರ್ಣವಾಗಿವೆ. 'ರಕ್ತಾಕ್ಷಿ' ನಾಟಕದಲ್ಲಿನ ಅವರ ಅಭಿನಯ ಯುವಜನರನ್ನು ನಾಚಿಸುವಷ್ಟು ಚೇತೋಹಾರಿ.

–ಡಾ. ರುದ್ರೇಶ್ ಅದರಂಗಿ, ಬೆಂಗಳೂರು